ಈ ಮಾಂಗಾ ಅನ್ನುವ ಕಲಾಪ್ರಕಾರ. ಯುದ್ಧದಲ್ಲಿ ಅನುಭವಿಸಿದ ಅಪಾರ ಹಾನಿ, ನೋವುಗಳು ಒಂದೆಡೆ; ತದನಂತರದ ಹಲವು ವರ್ಷಗಳ ಕಾಲ ಇದ್ದ ವಿದೇಶೀ ಮಿಲಿಟರಿ ಪಡೆಗಳ ಆಡಳಿತ ಮತ್ತೊಂದೆಡೆ. ಇಂಥ ವಿಕ್ಷಿಪ್ತ ಕಾಲಘಟ್ಟದಲ್ಲಿ ಜಪಾನಿ ಕಲಾವಿದರು ತಮ್ಮದೇ ಆದ ಕಲಾಪ್ರಕಾರಕ್ಕೆ ಹೊಸ ಜೀವ ನೀಡತೊಡಗಿದರು. ತಮ್ಮ ಅದುವರೆಗಿನ ಸಂಕಟ ಹತಾಶೆಗಳ ಬಿಡುಗಡೆಯ ದಾರಿಯಾಗಿ ಮಾಂಗಾ ಅವರಿಗೆ ಗೋಚರಿಸಿರಬೇಕು. ಜಪಾನ್ ಅನುಸರಿಸುತ್ತಿದ್ದ ಕೊಳ್ಳೆಯಾಳಿಕೆಯ ರಾಜನೀತಿ ಹಾಗೂ ಸೈನ್ಯ ಕೇಂದ್ರೀಕೃತ ವಿಧೇಯತೆಗೆ ವ್ಯತಿರಿಕ್ತವೆನಿಸುವಂತೆ ರಚಿತವಾದ ಮಾಂಗಾ ಕಥೆಗಳು ಅಲ್ಲಿಯ ಜನರ ಮನ ಗೆಲ್ಲತೊಡಗಿದವು. ಅದೇ ಸಮಯಕ್ಕೆ, ನಿರ್ದಿಷ್ಟ ಪ್ರಕಾರದ ಕಲೆ ಮತ್ತು ಸಾಹಿತ್ಯ ರಚನೆಯ ಮೇಲೆ ಇದ್ದ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದು ಹಾಕಲಾಯಿತು. ಇದು ಮಾಂಗಾದಂತಹ ಸೃಷ್ಟಿಶೀಲ ಕಲಾ ಮಾಧ್ಯಮ ತ್ವರಿತವಾಗಿ ಬೆಳೆಯುತ್ತ ಎಲ್ಲೆಡೆ ಹರಡಲು ಅನುವು ಮಾಡಿಕೊಟ್ಟಿತು.

ಯುದ್ಧಾನಂತರ, ಜಿದ್ದಿಗೆ ಬಿದ್ದಂತೆ ಪುಟಿದೆದ್ದು ನಿಂತ ರಾಷ್ಟ್ರ, ಅದೇ ಅವಧಿಯಲ್ಲಿ ನಿಧಾನ ವೃದ್ಧಿಸುತ್ತ ಮನೆಮಾತಾದ ಮಾಂಗಾ – ಇವೆರಡಕ್ಕೂ ಯಾವುದೋ ಒಂದು ತೆಳ್ಳನೆಯ ಸ್ತರದಲ್ಲಿ ಅವ್ಯಕ್ತವಾದ ಸಂಬಂಧವೊಂದಿರಬಹುದೇ? ಈ ಕುರಿತು ಯೋಚಿಸುತ್ತಿರುವಾಗ, ಕೆ.ವಿ. ಅಕ್ಷರರ 'ಸೇತುಬಂಧನ' ನಾಟಕ ನೆನಪಿಗೆ ಬರುತ್ತದೆ. ಹೊಳೆಯಾಚೆ ಒಂದು ಊರಿದೆ. ಆ ಊರಿನ ಸುಲಭ ಸಂಪರ್ಕದ ಉದ್ದೇಶದಿಂದ ಸರ್ಕಾರ ಹೊಳೆಗೆ ಸೇತುವೆಯೊಂದನ್ನು ಕಟ್ಟುತ್ತದೆ. ಆ ಹೊಸ ಸೇತುವೆ ರಾಜಕೀಯ ಕೆಸರೆರಚಾಟ, ಆರ್ಥಿಕ ಅಸಮತೋಲನ, ಮನಸುಗಳ ವಿಘಟನೆಯನ್ನು ಉದ್ದೀಪಿಸುತ್ತ ಇಡೀ ಊರಿನ ಸ್ವಾಸ್ಥ್ಯ ಪಲ್ಲಟಕ್ಕೆ ಕಾರಣವಾಗುವುದನ್ನು 'ಸೇತುಬಂಧನ' ನಾಟಕ ಚಿತ್ರಿಸುತ್ತದೆ. ಊರಿನಲ್ಲೊಂದಿಷ್ಟು ಯುವಕರಿದ್ದಾರೆ. ಊರಿನ ಹಿತಕ್ಕಾಗಿ ಶ್ರಮಿಸುವವರು ಅವರು. ಆದರೆ, ಆ ಯುವಕರು ಪ್ರಬಲ ಗುಂಪುಗಾರಿಕೆ, ಒಳಜಗಳದ ಮುಂದೆ ಏನೂ ಮಾಡಲಾಗದೇ ಹೈರಾಣಾಗಿ ಕೈ ಚೆಲ್ಲಿ ಕೂರುತ್ತಾರೆ. ಹೀಗಿರುವಾಗ, 'ಮುಂದೇನು ಮಾಡುವುದು?' ಎನ್ನುವ ಪ್ರಶ್ನೆಯೇಳುತ್ತದೆ. 'ಒಂದು ಯಕ್ಷಗಾನ ಮೇಳ ಕಟ್ಟೋಣ', 'ಹೊಸ ಬಗೆಯ ಸಂಗೀತ ಶಾಲೆ ಆರಂಭಿಸೋಣ' ಎನ್ನುವ ಆಲೋಚನೆ ಅವರಲ್ಲಿ ಬಂದು ಅದಕ್ಕೆ ಗೆಳೆಯರ ಅನುಮೋದನೆಯೂ ದೊರೆಯುವಲ್ಲಿ ನಾಟಕ ಕೊನೆಗೊಳ್ಳುತ್ತದೆ. ಹಾಗಾದರೆ, ಒಂದು ನಾಟಕ ಶಾಲೆ, ನೃತ್ಯ ಮಂದಿರ ಅಥವಾ ಕಲಾಕ್ಷೇತ್ರ – ಇಂಥವುಗಳಿಗೆ ಊರೊಂದರ ಒಳತಲ್ಲಣಗಳನ್ನು ನಿಯಂತ್ರಿಸುವ ಶಕ್ತಿಯಿದೆಯೇ? ಇದು ಮೇಲ್ನೋಟಕ್ಕೆ ಕಾರ್ಯಸಾಧ್ಯವಲ್ಲದ

